# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **417** |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಮತ್ತು ಬಿಕ್ಕೋಡು ಹೋಬಳಿಯಲ್ಲಿ ರೈತರಿಗೆ 3 ಫೇಸ್ ವಿದ್ಯುತ್ ನೀಡುತ್ತಿರುವ ಸಮಯ ಎಷ್ಟು; | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಮತ್ತು ಬಿಕ್ಕೋಡು ಹೋಬಳಿಗಳ ವ್ಯಾಪ್ತಿಯ ಶೇ.90% ಗ್ರಾಮಗಳಿಗೆ ಅರೇಹಳ್ಳಿ 66/11ಕೆವಿ ವಿದ್ಯುತ್ ಉಪಕೇಂದ್ರದಿಂದ ಮತ್ತು ಶೇ.10% ಗ್ರಾಮಗಳಿಗೆ ಗೆಂಡೇಹಳ್ಳಿ 66/11ಕೆವಿ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ.<br>ಸದರಿ ಹೋಬಳಿಗಳಲ್ಲಿನ ಕಾಫಿ ಬೆಳೆಗಾರರ ಸ್ಥಾವರಗಳಿಗೆ ಎಲ್.ಟಿ-4ಸಿ ಜಕಾತಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಅರೇಹಳ್ಳಿ 66/11ಕೆವಿ ವಿದ್ಯುತ್ ಉಪಕೇಂದ್ರದ ವ್ಯಾಪ್ತಿಯಲ್ಲಿನ 24 ಗಂಟೆ 3 ಫೇಸ್ ಹಾಗೂ ಗೆಂಡೇಹಳ್ಳಿ 66/11ಕೆವಿ ವಿದ್ಯುತ್ ಉಪಕೇಂದ್ರದ (ಮೆಸ್ಕಾಂ) ವ್ಯಾಪ್ತಿಯಲ್ಲಿನ 12 ಗಂಟೆ 3 ಫೇಸ್ ವಿದ್ಯುತ್ ನೀಡಲಾಗುತ್ತಿದೆ. |
| ಆ) | ಅರೇಹಳ್ಳಿ ಮತ್ತು ಬಿಕ್ಕೋಡು ಹೋಬಳಿಯಲ್ಲಿ ಕಳೆದ 6 ತಿಂಗಳಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರ್ ಅಳವಡಿಸಲಾಗಿದೆ; (ಸಂಪೂರ್ಣ ಮಾಹಿತಿ ದಾಖಲೆ ಸಹಿತ ನೀಡುವುದು) | ಅರೇಹಳ್ಳಿ ಬಿಕ್ಕೋಡು ಹೋಬಳಿಯ ವ್ಯಾಪ್ತಿಯಲ್ಲಿ ಕಳೆದ 6 ತಿಂಗಳಲ್ಲಿ ಒಟ್ಟು 4 ಸಂಖ್ಯೆಯ 25 ಕೆ.ವಿ. ಸಾಮರ್ಥ್ಯದ ಪರಿವರ್ತಕಗಳನ್ನು ಅಳವಡಿಸಲಾಗಿದ್ದು, ಅವುಗಳ ವಿವರಗಳು ಕೆಳಕಂಡಂತಿವೆ:-<br>1. ಪಡುವಳಲು ಮತ್ತು ಅಂದೂರು ಗ್ರಾಮಗಳಲ್ಲಿ 02 (ತಲಾ ಒಂದು) ಸಂಖ್ಯೆಯ ಪರಿವರ್ತಕಗಳನ್ನು ಗಂಗಾಕಲ್ಯಾಣ ಕಾಮಗಾರಿಗಳ ಯೋಜನೆಯಡಿ ಅಳವಡಿಸಲಾಗಿದೆ.<br>2. ತುಂಬುದೇವನಹಳ್ಳಿ ಮತ್ತು ಹಾಡ್ಲಗೆರೆ ಗ್ರಾಮಗಳಲ್ಲಿ 02 (ತಲಾ ಒಂದು) ಸಂಖ್ಯೆಯ ಪರಿವರ್ತಕಗಳನ್ನು ಸ್ವಂತ ಕಾರ್ಯ ನಿರ್ವಹಣೆ ಕಾಮಗಾರಿಗಳ ಯೋಜನೆಯಡಿ ಅಳವಡಿಸಲಾಗಿದೆ. |
| ಇ) | ಬಿಕ್ಕೋಡು ಹೋಬಳಿಯ ಮೊಗಸವಾರ ಮತ್ತು ಕುಶವಾರ ಗ್ರಾಮದಲ್ಲಿ ಒಂದು ಟ್ರಾನ್ಸ್‌ಫಾರಂಗೆ ಅಳವಡಿಸಿದ ಬೋರ್‌ವೆಲ್ ಮೋಟರ್ ಸಂಖ್ಯೆ ಎಷ್ಟು; | ಬಿಕ್ಕೋಡು ಹೋಬಳಿಯ ಮೊಗಸವಾರ ಮತ್ತು ಕುಶವಾರ ಗ್ರಾಮದಲ್ಲಿ 25 ಕೆ.ವಿ.ಎ ಸಾಮರ್ಥ್ಯದ ಪರಿವರ್ತಕಕ್ಕೆ 5 ಹೆಚ್.ಪಿ. ಯ 03 ರಿಂದ 04 ಬೋರ್ ವೆಲ್ ಮೋಟಾರ್‌ಗಳನ್ನು ಅಳವಡಿಸಲಾಗಿದೆ. |

| | | |
|---|---|---|
| ಈ) | ಬಿಕ್ಕೋಡು ಹೋಬಳಿಯ ಮೊಗಸವಾರ ಗ್ರಾಮದಲ್ಲಿ ವಿದ್ಯುತ್ ವ್ಯತ್ಯಯವಾಗಿ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ; | ಬಿಕ್ಕೋಡು ಹೋಬಳಿಯ ಮೊಗಸವಾರ ಗ್ರಾಮಕ್ಕೆ ಹಾಲಿ ಬೇಲೂರು 66/11ಕೆವಿ ವಿದ್ಯುತ್ ಉಪಕೇಂದ್ರದ ಪ್ರಸಾದೀಹಳ್ಳಿ ನಿರಂತರ ಜ್ಯೋತಿ ಯೋಜನೆಯ ಫೀಡರ್ ಮುಖಾಂತರ ಗ್ರಾಮಗಳು ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ 24 ಗಂಟೆಗಳ ಕಾಲ ಸಮರ್ಪಕವಾಗಿ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. |
| ಉ) | ಬಿಕ್ಕೋಡು ಹೋಬಳಿಯ ಮೊಗಸವಾರ ಗ್ರಾಮದಲ್ಲಿ ಬೇಡಿಕೆಗೆ ಅನುಸಾರ ಅರ್ಜಿ ಸಲ್ಲಿಸಿದ್ದರು ಟ್ರಾನ್ಸ್‌ಫಾರಂ ಅಳವಡಿಸದಿರಲು ಕಾರಣವೇನು; ಅಳವಡಿಸುವುದಾದರೆ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು; ಎಷ್ಟು ದಿನದ ಒಳಗೆ ಅಳವಡಿಸಲಾಗುತ್ತದೆ; (ಸಂಪೂರ್ಣ ಮಾಹಿತಿ ದಾಖಲೆ ಸಮೇತ ನೀಡುವುದು) | ಮೊಗಸವಾರ ಗ್ರಾಮದಲ್ಲಿರುವ ಒಂದು ಪರಿವರ್ತಕ ಕೇಂದ್ರವು ಅಧಿಕ ಹೊರೆಯಿಂದ ಕೂಡಿದ್ದು, ಹೆಚ್ಚುವರಿಯಾಗಿ ಒಂದು ಪರಿವರ್ತಕ ಅಳವಡಿಸುವಂತೆ ಮೊಗಸವಾರ ಗ್ರಾಮಸ್ಥರು ಮನವಿ ಸಲ್ಲಿಸಿರುತ್ತಾರೆ. ಹೆಚ್ಚುವರಿಯಾಗಿ 25 ಕೆ.ವಿ.ಎ. ಸಾಮರ್ಥ್ಯದ ಪರಿವರ್ತಕವನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು. |
| ಊ) | ಬೇಲೂರು ವಿದ್ಯುತ್ ಸರಬರಾಜು ನಿಗಮದಲ್ಲಿ ಅಧಿಕಾರಿಗಳು/ಸಾರ್ವಜನಿಕರ ಬಳಿ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲದಿರುವುದರಿಂದ ಈ ಅಧಿಕಾರಿಗಳಿಗೆ/ ಸಿಬ್ಬಂದಿಗಳ ಮೇಲೆ ಕೈಗೊಂಡ ಕ್ರಮಗಳೇನು? | ಬೇಲೂರು ಉಪವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ, ಸಾರ್ವಜನಿಕರ ಬಳಿ ಸೌಜನ್ಯಯುತವಾಗಿ ವರ್ತಿಸುವಂತೆ ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸರಿಯಾದ ರೀತಿಯಲ್ಲಿ ಸ್ಪಂದಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ. |

ಸಂಖ್ಯೆ: ಎನರ್ಜಿ 39 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು